**C**

**CCE PF**
**CCE PR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2019**

**S.S.L.C. EXAMINATION, MARCH / APRIL, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 27. 03. 2019 ] **ಸಂಕೇತ ಸಂಖ್ಯೆ : 33-K**

Date : 27. 03. 2019 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 14 × 1 = 14 |
| 1. | ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು ? | |
| | ***ಉತ್ತರ :*** | |
| | ವಿಷದ ಬಾಣವು ಮರಕ್ಕೆ ತಗುಲಿದ್ದರಿಂದ ಮರವು ಒಣಗಿ ನಿಂತಿತು. | |
| 2. | ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ ? | |
| | ***ಉತ್ತರ :*** | |
| | ದೇಶದ ಉದ್ಧಾರ ಸೈನಿಕರನ್ನು, ಸಾಹಿತಿಗಳನ್ನು, ಕೃಷಿಕರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ ?<br>***ಉತ್ತರ :***<br>ಶ್ರೇಷ್ಠ ಗುರುವಿನಲ್ಲಿ ಶಿಷ್ಯರ ಮನಸ್ಸನ್ನು ಓದಬಲ್ಲ, ಅವರ ಅಭಿಲಾಷೆಗೆ ತಕ್ಕಂಥ ಜ್ಞಾನಕೊಡುವ ಶಕ್ತಿ ಇರುತ್ತದೆ. | |
| 4. | ಸಸ್ತನಿಗಳ ಆಶ್ರಯದಾಣಗಳು ಯಾವುವು ?<br>***ಉತ್ತರ :***<br>ಗುಹೆ, ಪೊಟರೆ, ಗೂಡು, ಬಿಲ ಇವು ಸಸ್ತನಿಗಳ ಆಶ್ರಯದಾಣಗಳಾಗಿವೆ. | |
| 5. | ಗುರುಗಳು ಕಾಫೀ–ಕಪ್ಪು ವಿಷಯದಲ್ಲಿ ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದ್ದಾರೆ ?<br>***ಉತ್ತರ :***<br>ಗುರುಗಳು ಕಾಫೀ–ಕಪ್ಪು ವಿಷಯದಲ್ಲಿ ಕಾಫೀಗಿಂತ ಕಪ್ಪಿಗೆ ಹೆಚ್ಚು ಮಹತ್ವ ಕೊಡುವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದ್ದಾರೆ. | |
| 6. | ಲಂಡನ್‌ನಲ್ಲಿರುವ ವ್ಯಾಕ್ಸ್ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಹೇಗೆ ಬಂದಿತು ?<br>***ಉತ್ತರ :***<br>ಲಂಡನ್ ಮ್ಯೂಸಿಯಂನಲ್ಲಿರುವ ವ್ಯಾಕ್ಸ್ ಗೊಂಬೆಗಳನ್ನು ಮೇಡಂ ಟುಸ್ಸೋಡ್‌ರವರು ಮೊದಲು ಮಾಡಿದುದರಿಂದ ಲಂಡನ್‌ನಲ್ಲಿರುವ ವ್ಯಾಕ್ಸ್ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಬಂದಿತು. | |
| 7. | ಗೋಪಾಲನ ಗೆಳೆಯರ ಹೆಸರೇನು ?<br>***ಉತ್ತರ :***<br>ರಾಮು, ಕಿಟ್ಟಿ, ನಾಣಿ ಮತ್ತು ಮಾಧು ಇವು ಗೋಪಾಲನ ಗೆಳೆಯರ ಹೆಸರುಗಳು. | |
| 8. | ಗೋಪಾಲನಿಗೆ ಬಣ್ಣಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು ?<br>***ಉತ್ತರ :***<br>ಗೋಪಾಲನಿಗೆ ಬಣ್ಣಬಣ್ಣದ ಹೂಗಳು ಸಾವಿರಾರು ಮಳೆಬಿಲ್ಲು (ಕಾಮನಬಿಲ್ಲು)ಗಳು ಸೇರಿ ಕುಣಿದಂತೆ ಕಾಣಿಸುತ್ತಿದ್ದವು. | |
| 9. | ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಯಾವುದು ?<br>***ಉತ್ತರ :***<br>ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿಯು "ನಾನೂ ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು" ಎಂದು ಸವಾಲು ಹಾಕುವುದು. | |
| 10. | ಸಿದ್ಧಾರ್ಥ ಯಾವುದರ ಮೋಹವನ್ನು ತೊರೆದನು ?<br>***ಉತ್ತರ :***<br>ಸಿದ್ಧಾರ್ಥನು ಅರಮನೆಯ ಮೋಹವನ್ನು ತೊರೆದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾರೆ ? | |
| | ***ಉತ್ತರ :*** | |
| | ಇಬ್ಬನಿಯು ಸದ್ದುಗದ್ದಲವಿಲ್ಲದೆ ಮೌನವಾಗಿ ಕರಗುವುದಿಂದ ಕವಿ ಮಾನವನ ಬದುಕನ್ನು ಇಬ್ಬನಿಗೆ ಹೋಲಿಸಿದ್ದಾರೆ. | |
| 12. | ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರು ? | |
| | ***ಉತ್ತರ :*** | |
| | ಕುಣಿಗಲ್ ಕೆರೆಯ ಅಂದವನ್ನು ನೋಡಲು ಶಿವನು ಬಂದನು. | |
| 13. | ಸಿದ್ಧರಾಮನ ಪ್ರಕಾರ ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕು ? | |
| | ***ಉತ್ತರ :*** | |
| | ಸಿದ್ಧರಾಮನ ಪ್ರಕಾರ ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಒಂದೇ ಆಗಿರಬೇಕು. | |
| 14. | ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ ? | |
| | ***ಉತ್ತರ :*** | |
| | ಅರ್ಜುನನು ಉತ್ತರ ಕುಮಾರನನ್ನು ನಾಡನರಿ ಎಂದು ಕರೆದಿದ್ದಾನೆ. | |
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :** (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | 15 × 2 = 30 |
| 15. | ಮರವನ್ನು ಬಿಟ್ಟುಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು ? | |
| | ***ಉತ್ತರ :*** | |
| | ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು, "ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ, ಹಸಿರು ಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ, ನೆರಳು ನೀಡಿದೆ. ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಹಾಗೆಂದು ಈ ಸ್ಥಿತಿಯಲ್ಲಿ ನಾನು ಅದನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಆ ಮರಕ್ಕೆ ಕೃತಘ್ನನಾಗಲಾರೆನು. ನಾನು ಎಲ್ಲೋ ಹೋಗಿ ಆಹಾರವನ್ನು ಸಂಪಾದಿಸಿಕೊಂಡು ಬಂದು ಇಲ್ಲೇ ವಾಸ ಮಾಡುತ್ತೇನೆ. ಅದರ ಜೊತೆಗೇ ಇದ್ದು ಉಪಕಾರ ಸ್ಮರಣೆ ಮಾಡುತ್ತೇನೆ. ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸುತ್ತೇನೆ". ಎಂದು ಸಮರ್ಥನೆಯನ್ನು ನೀಡಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ?<br>***ಉತ್ತರ :***<br>ನಮ್ಮ ದೇಶದ ರಕ್ಷಣಾಪಡೆ ಪ್ರಬಲವಾಗಿರಬೇಕು ಏಕೆಂದರೆ ರಕ್ಷಣಾಪಡೆ ಪ್ರಬಲವಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ. ಇಲ್ಲದಿದ್ದರೆ ಬಲಿಷ್ಠ ದೇಶ ಎಲ್ಲರನ್ನೂ ಹೊಡೆದು ಹಾಕಿ ತಾನೇ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ, ಸರ್ವಾಧಿಕಾರಿಯಂತೆ ಮೆರೆಯಬಹುದು. ದೇಶದ ಜನರನ್ನು ಗುಲಾಮರನ್ನಾಗಿ ಮಾಡಿಕೊಳ್ಳಬಹುದು. ಆದರೆ ದೇಶದ ರಕ್ಷಣಾ ಪಡೆ ಪ್ರಬಲವಾಗಿದ್ದರೆ ಇವೆಲ್ಲವುಗಳಿಂದ ದೇಶವನ್ನು ಸಂರಕ್ಷಣೆ ಮಾಡಲು ಸಾಧ್ಯವಾಗುತ್ತದೆ. ಆದುದರಿಂದ ನಮ್ಮ ದೇಶದ ರಕ್ಷಣಾಪಡೆ ಪ್ರಬಲವಾಗಿರಬೇಕು. | |
| 17. | ಪೆನ್ನು ಏಕೆ ಖಡ್ಗಕ್ಕಿಂತ ಹರಿತವಾದುದು ?<br>***ಉತ್ತರ :***<br>ಪೆನ್ನು ಏಕೆ ಖಡ್ಗಕ್ಕಿಂತ ಹರಿತವಾದುದು ಎಂದರೆ, ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಅಂದರೆ ಬರವಣಿಗೆ ಅಷ್ಟೊಂದು ಪರಿಣಾಮಕಾರಿಯಾದುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕಥೆ, ಕವನ ಹಲವರ ಬದುಕನ್ನು ಬದಲಾಯಿಸಬಲ್ಲದು. ಒಂದು ಸರ್ಕಾರ ಉರುಳಿಸಿ ಮತ್ತೊಂದು ಸರ್ಕಾರ ತರಬಹುದು. ಈ ನಿಟ್ಟಿನಲ್ಲಿ ಯುದ್ಧಕ್ಕಿಂತ ಸಾಹಿತ್ಯ ಹೆಚ್ಚು ಶಕ್ತಿಶಾಲಿಯಾದುದು. ಸಾಹಿತಿಗಳಿಗೆ ಸಾಹಿತ್ಯದ ಸತ್ವದಿಂದಾಗಿ ನಾಡಿನಲ್ಲಿ ಅಪಾರ ಗೌರವ ಇರುವುದು. ಇಂಥ ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜವು ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯವಾಗುವುದು. ಆದುದರಿಂದ ಪೆನ್ನು ಖಡ್ಗಕ್ಕಿಂತಲೂ ಹರಿತವಾದುದು. | |
| 18. | ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?<br>***ಉತ್ತರ :***<br>ಬಾಲಕ ಪುಟ್ಟಯ್ಯನು ಬಾಲ್ಯದಲ್ಲಿಯೇ ಕಣ್ಣುಗಳನ್ನು ಕಳೆದುಕೊಂಡನು. ಹುಟ್ಟಿದ ಆರು ತಿಂಗಳಿಗೆ ಕಣ್ಣು ಬೇನೆ ಬಂದು ಕಣ್ಣಿಗೆ ಪರಿ ಬಂದಿತು. ಆಗ ಬರೀ ನಾಟೀ ವೈದ್ಯ ಇತ್ತು. ಆಗ ಕಣ್ಣು ಗುಡ್ಡಿಗೆ ತೊನಸಿ ಹುಳು ಮುಟ್ಟಿಸುತ್ತಿದ್ದರು. ಹಾಗೆ ತೊನಸಿ ಹುಳು ಮುಟ್ಟಿಸುವಾಗ ತೊನಸಿ ಕೈಜಾರಿ ಕಣ್ಣೊಳಗೆ ಬಿದ್ದುಬಿಟ್ಟವು. ಆಗ ಕಣ್ಣಿನ ಪರಿ ಹರಿಯುವುದರ ಬದಲು ಕಣ್ಣಿನ ಗುಡ್ಡೆಯೇ ಹರಿದು ಕಣ್ಣು ಹೋಗಿಬಿಟ್ಟವು. ಹೀಗೆ ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 19. | ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?<br>**ಉತ್ತರ :**<br>ಹಕ್ಕಿಗಳು ತಮಗಿರುವ ಅಪೂರ್ವ ಹಾರಾಟ ಶಕ್ತಿಯಿಂದ ಎಲ್ಲೆಂದರಲ್ಲಿ ಗೂಡು ನಿರ್ಮಿಸಬಹುದಾದ ಅನಂತ ಅವಕಾಶಗಳನ್ನು ಪಡೆದಿವೆ. ಹಕ್ಕಿಗಳು ಸಾಗರದ ದ್ವೀಪ, ಗಿರಿಶಿಖರದ ನೆತ್ತಿ, ಮನುಷ್ಯ ನುಸುಳಲಾರದ ನಿಬಿಡ ವನಶ್ರೇಣಿ, ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ, ರಕ್ತಹೆಪ್ಪುಗಟ್ಟಿಸುವ ಶೀತಲ ಧ್ರುವ ಪ್ರದೇಶ – ಹೀಗೆ ಎಲ್ಲೆಲ್ಲೂ ಗೂಡು ಕಟ್ಟಬಲ್ಲವು. | |
| 20. | ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ ?<br>**ಉತ್ತರ :**<br>ಹಕ್ಕಿಗಳು ಗೂಡುಗಳನ್ನು ಬಹಳ ಸುಂದರವಾಗಿ ಅಲಂಕರಿಸುತ್ತವೆ. ಗೂಡನ್ನು ಅಂದಗೊಳಿಸುವ ಸೌಂದರ್ಯ ಪ್ರಜ್ಞೆ ಹಕ್ಕಿಗಳಿಗಿದೆ. ಗೂಡಿನ ಒಳಭಾಗದಲ್ಲಿ ಶುಚಿತ್ವಕ್ಕೆ ಹಕ್ಕಿಗಳು ಹೆಚ್ಚು ಮಹತ್ವ ನೀಡುತ್ತವೆ. ಕೆಲವು ಹಕ್ಕಿಗಳು ವಿಪರೀತ ಅಲಂಕಾರ ಪ್ರಜ್ಞೆ ಹೊಂದಿವೆ. ಇವು ವರ್ಣಮಯ ಹೂದಳವನ್ನೋ ಅಥವಾ ಹೊಳೆವ ಕಲ್ಲುಗಳನ್ನೋ ಹೆಕ್ಕಿ ತಂದು ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳಂತೂ ಬಣ್ಣದ ಗಾಜಿನ ಚೂರು, ಬಟ್ಟೆಯ ಚಿಂದಿ ಮುಂತಾದವುಗಳನ್ನು ಗೂಂಡಿಗೆ ತರುತ್ತವೆ. ಅಮೇರಿಕಾದಲ್ಲಿ ಗ್ಯಾನೆಟ್ ಕಡಲ ಹಕ್ಕಿ ಗಾಲ್ಫ್ ಚೆಂಡು, ನೀಲಿಶೀಶೆಯ ಚೂರು, ಈರುಳ್ಳಿ ಸಿಪ್ಪೆ ಮತ್ತು ಸಣ್ಣ ಬೊಂಬೆಯೊಂದನ್ನು ತಂದು ಗೂಡನ್ನು ಅಲಂಕರಿಸಿತ್ತು. ಹೀಗೆ ಹಕ್ಕಿಗಳು ಗೂಡುಗಳನ್ನು ಅಲಂಕರಿಸುತ್ತವೆ. | |
| 21. | ಹೆಡ್ ಮಾಸ್ತರರ ಬಳಿ ಹಿರಿಯ ವಿದ್ಯಾರ್ಥಿಗಳು ಹೇಳಿಕೊಳ್ಳುತ್ತಿದ್ದ ವಿಚಾರಗಳು ಯಾವುವು ?<br>**ಉತ್ತರ :**<br>ಹೆಡ್ ಮಾಸ್ತರರ ಬಳಿ ಹಿರಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿದ್ದರು. "ಒಂದಲ್ಲ ಒಂದು ತಕರಾರು. ಎಲ್ಲಾ ಕಡೆಗೆ ವ್ಯಾಪಾರ ಕಡಿಮೆಯಾಗುತ್ತಿದೆ. ರೂಪಾಯಿ ಬೆಲೆ ಕುಸಿಯುತ್ತಿದೆ. ಹಣಕ್ಕೆ ಬೆಲೆಯೇ ಇಲ್ಲ. ಮಕ್ಕಳು ಬೆಳೆಯುತ್ತಿದ್ದಾರೆ. ಅವರನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ." ಹೀಗೆ ತೊಂದರೆಗಳ ಸರಮಾಲೆಯನ್ನು ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಹೇಳಿಕೊಳ್ಳುತ್ತಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ತನ್ನ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು ?<br>***ಉತ್ತರ :***<br>ತನ್ನ ಸಹಾಯದಿಂದ ಮೇಲೇರಿದವರಿಗೆ ಏಣಿಯು ಒಳ್ಳೆಯ ಉಪದೇಶವನ್ನು ನೀಡಿದೆ. ಮೇಲಿನ ಅಂತಸ್ತು ಶಾಶ್ವತವಾದುದಲ್ಲ. ಇದು ಸುರಕ್ಷಿತವಾದುದೂ ಅಲ್ಲ. ಹಾಗಾಗಿ ಮೇಲೇರಲು ಸಹಾಯ ಮಾಡಿದವರ ಬಗ್ಗೆ ಕಾಳಜಿ ಇರಬೇಕು. ಅವರಿಗೆ ಕೃತಜ್ಞರಾಗಿರಬೇಕು. ಸಹಾಯ ಮಾಡಿದವರೂ ಮೇಲೇರಲು ಸಹಾಯ ಮಾಡಬೇಕು. ಮೇಲೇರಿದ್ದೇನೆಂಬ ಅಹಂ ಬಿಟ್ಟು ವಿನಯತೆಯನ್ನು ರೂಢಿಸಿಕೊಳ್ಳಬೇಕು. ಹೀಗೆ ಏಣಿಯು ತನ್ನ ಸಹಾಯದಿಂದ ಮೇಲೇರಿದವರಿಗೆ ಉಪದೇಶ ನೀಡಿತು. | |
| 23. | ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ ?<br>***ಉತ್ತರ :***<br>ಮಾನವನ ಬದುಕು ಕರ್ಪೂರದಂತೆ ಇರಬೇಕು. ಏಕೆಂದರೆ ಕರ್ಪೂರವು ಸದ್ದುಗದ್ದಲವಿಲ್ಲದೆ ಮೌನವಾಗಿ ಕರಗುತ್ತದೆ. ಅದು ಮೌನವಾಗಿ ಕರಗುವುದರ ಮೂಲಕ ಸುತ್ತಮುತ್ತಲಿನ ಪರಿಸರವನ್ನು ಪರಿಮಳಭರಿತವನ್ನಾಗಿಸುತ್ತದೆ. ಹಾಗೆಯೇ ಮಾನವನ ಬದುಕು ಕೂಡ ಕರ್ಪೂರದಂತೆ ಸದ್ದು ಗದ್ದಲವಿಲ್ಲದೆ ಅಹಂ ತೊರೆದು ಶಾಂತಿ, ಮೌನದಿಂದ ಇರಬೇಕು. | |
| 24. | ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತು ?<br>***ಉತ್ತರ :***<br>ಕುಣಿಗಲ್ ಕೆರೆ ನೋಡುವವರಿಗೆ ಒಂದು ವೈಭವದಂತೆ, ಮನಸ್ಸಿಗೆ ಆನಂದವನ್ನು ನೀಡುವಂತೆ ಕಾಣುತ್ತಿತ್ತು. ಇದು ಸಂತೆಯ ಹಾದಿಯಲ್ಲಿದ್ದು, ಕಲ್ಲುಕಟ್ಟೆಯಿಂದ ಸುಂದರವಾಗಿ ಇದು ನಿರ್ಮಾಣಗೊಂಡಿತ್ತು. ಇದು ಬಾಳೆಯ ಹಣ್ಣಿನಂತೆ ಬಾಗಿಕೊಂಡು, ನಿಂಬೆಯ ಹಣ್ಣಿನಂತೆ ತುಂಬಿಕೊಂಡಂತೆ ಕಾಣಿಸುತ್ತಿತ್ತು. ಇದು ತನ್ನ ಸೌಂದರ್ಯದಿಂದಾಗಿ ಎಂಥವರನ್ನು ಬೆರಗುಗೊಳಿಸುವಂತೆ ಕಾಣಿಸುತ್ತಿತ್ತು. | |
| 25. | ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ ?<br>***ಉತ್ತರ :***<br>ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ. ಏಕೆಂದರೆ ಜನರು ನೀರು ಕಂಡಲ್ಲಿ ಮುಳುಗುವರು, ಮರವು ಕಂಡಲ್ಲಿ ಸುತ್ತುವರು, ಬತ್ತುವ ಜಲವನ್ನು, ಒಣಗುವ ಮರವನ್ನು ಮೆಚ್ಚುವರು. ಆದರೆ ಬತ್ತದ, ಒಣಗದ ಸದಾ ಚೈತನ್ಯದಿಂದಿರುವ ಪರಮಾತ್ಮನನ್ನು ಅರಿಯದೆ, ಅವನನ್ನು ನಂಬದೆ ಇರುವುದರಿಂದ ಅವರ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಬಾಹ್ಯ ಹಾಗೂ ಆಂತರಿಕ ನಡವಳಿಕೆಗಳಲ್ಲಿ ಸಾಮ್ಯತೆ ಇರಬೇಕೆಂದು ಸಿದ್ಧರಾಮನು ತನ್ನ ವಚನದಲ್ಲಿ ಹೇಗೆ ಪ್ರತಿಪಾದಿಸಿದ್ದಾನೆ ?<br>***ಉತ್ತರ :***<br>ಬಾಹ್ಯ ಹಾಗೂ ಆಂತರಿಕ ನಡವಳಿಕೆಗಳಲ್ಲಿ ಸಾಮ್ಯತೆ ಇರಬೇಕೆಂದು ಸಿದ್ಧರಾಮನು ತನ್ನ ವಚನದಲ್ಲಿ ಉದಾಹರಣೆಗಳ ಮೂಲಕ ಪ್ರತಿಪಾದಿಸಿದ್ದಾನೆ. ವೇಷ ಧರಿಸಿದ ಮೇಲೆ ವೇಷದಂತೆಯೇ ನಮ್ಮ ಆಚರಣೆಯು ಇರಬೇಕು. ಇಲ್ಲದಿದ್ದರೆ ವೇಷಧರಿಸಿ ಏನು ಪ್ರಯೋಜನ. ವೇದಾಂತವನ್ನು ಓದಿದ ಮೇಲೆ ಆತ್ಮಜ್ಞಾನಿಯಾಗಬೇಕು. ಇಲ್ಲದಿದ್ದರೆ ವೇದವನ್ನು ಓದಿ ಏನು ಪ್ರಯೋಜನ. ಕೆರೆಯನ್ನು ನಿರ್ಮಿಸಿದ ಮೇಲೆ ಅದರಲ್ಲಿ ನೀರು ಇರಬೇಕು. ನೀರೇ ಬರದಿದ್ದರೆ ಕೆರೆ ನಿರ್ಮಿಸಿ ಏನು ಪ್ರಯೋಜನ ಎಂದು ಸಿದ್ಧರಾಮನು ಬಾಹ್ಯ ಮತ್ತು ಆಂತರಿಕ ನಡವಳಿಕೆಗಳಲ್ಲಿ ಸಾಮ್ಯತೆ ಇರಬೇಕೆಂದು ಪ್ರತಿಪಾದಿಸಿದ್ದಾನೆ. | |
| 27. | 'ಕಾದು ನಡೆ' ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು ?<br>***ಉತ್ತರ :***<br>ಉತ್ತರಕುಮಾರನು ಕೌರವರ ಸೇನೆಯನ್ನು ನೋಡಿ ಹೆದರುತ್ತಾನೆ. ಸಮುದ್ರದಂತಿರುವ ಈ ಸೈನ್ಯದೊಂದಿಗೆ ಯುದ್ಧ ಮಾಡಿ ಗೆಲ್ಲಲು ಸಾಧ್ಯವಿಲ್ಲ ಎಂದಾಗ ಅರ್ಜುನನು ನಗುತ ರಥವನ್ನು ಮುಂದೆ ಓಡಿಸಲು, ಉತ್ತರಕುಮಾರನು ರಥದಿಂದ ಜಿಗಿದು ಓಡಿ ಹೋಗುತ್ತಾನೆ. ಆಗ ಅರ್ಜುನನು ಓಡಿಹೋಗುತ್ತಿರುವ ಉತ್ತರಕುಮಾರನನ್ನು ಹಿಡಿದು ಅವನನ್ನು ಗದರಿಸಿ, ಸಭೆಯಲ್ಲಿ ಹೆಂಗಳೆಯರ ಮುಂದೆ ಬಾಯಿಗೆ ಬಂದಂತೆ ಮಾತನಾಡಿದೆ, ಈಗ ಯುದ್ಧಭೂಮಿಯಲ್ಲಿ ಶತ್ರು ಸೈನ್ಯದೊಂದಿಗೆ ಯುದ್ಧ ಮಾಡದೆ ಅಂಜುಬುರುಕ ನರಿಯಂತೆ ಹಲ್ಲು ಕಿರಿದರೆ ನಾನು ಬಿಡುವುದಿಲ್ಲ. ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಯುದ್ಧ ಮಾಡು ಎಂದು ಅರ್ಜುನನು ಉತ್ತರನನ್ನು ಒತ್ತಾಯಿಸಿದನು. | |
| 28. | ಕಳ್ಳರ ಗುರುವಿನ ಮನಃಪರಿವರ್ತನೆ ಹೇಗಾಯಿತು ?<br>***ಉತ್ತರ :***<br>ಕಳ್ಳರ ಗುರು ಭೀಮನಾಯಕನು ಕಳ್ಳತನ ಮಾಡಿದ ಮನೆಯ ವೈದ್ಯರು ಅವನ ಮಗನ ಪ್ರಾಣ ಉಳಿಸಲು ಬಂದು, ಔಷಧಿಯನ್ನು ನೀಡಿ, ಪ್ರಾಣ ಉಳಿಸಿದರು. ವೈದ್ಯರು ಹೇಳಿದ "ಕಾಯುವುದು ದೇವರ ಕೆಲಸ" ಎಂಬ ಮಾತು ಅವನ ಹೃದಯವನ್ನು ತಟ್ಟಿತು. ತಾನು ಮಾಡಿದ ತಪ್ಪಿನ ಅರಿವಾಗಿ ತಾನು ಕದ್ದ ವಸ್ತುಗಳನ್ನು ವೈದ್ಯರಿಗೆ ಒಪ್ಪಿಸಿದನು. ಹೀಗೆ ಕಳ್ಳರ ಗುರುವಿನ ಮನಃಪರಿವರ್ತನೆಯಾಯಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಮನುಕುಲದ ಭವ್ಯ ಬದುಕು ಹೇಗೆ ಅರಳಬೇಕಿದೆ ಎಂದು ಕವಯಿತ್ರಿ ಹೇಳಿದ್ದಾರೆ ?<br>*ಉತ್ತರ :*<br>ಕವಯಿತ್ರಿಯು ಮನುಕುಲದ ಭವ್ಯ ಬದುಕು ಜೈವಿಕ ಇಂಧನದಿಂದ ಅರಳಬೇಕಿದೆ ಎಂದು ಬಯಸಿದ್ದಾರೆ. ತೆಂಗನ್ನು ಬೆಳೆಯುತ್ತಾ, ಅದರಿಂದ ತೈಲಧಾರೆ ಹೊಮ್ಮಿ ಬರಬೇಕು. ಹೊಂಗೆ, ಹಿಪ್ಪೆಗಳ ಜೀವಮೇಳ ನಡೆದು ಅದರಿಂದಲೂ ತೈಲಧಾರೆ ಹೊಮ್ಮಿ ಬರಬೇಕು. ಮುಗಿದು ಹೋಗುತ್ತಿರುವ ತೈಲ ಸಂಪತ್ತನ್ನು ಜೈವಿಕ ಇಂಧನ ಪರ್ಯಾಯ ಇಂಧನವಾಗಿ ಮನುಕುಲವನ್ನು ಬೆಳಗುವುದರ ಮೂಲಕ ಮನುಕುಲದ ಭವ್ಯ ಬದುಕು ಅರಳಬೇಕಿದೆ ಎಂದು ಕವಯಿತ್ರಿ ಹೇಳಿದ್ದಾರೆ. | |
| 30. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ಮೂರು ಅಂಕಗಳು)<br>ಯುಗದ ಹಿಂದಿನ ......................................................<br>.............................................................................<br>.............................................................................<br>.............................................................. ಸವಿಚೈತ್ರವು.<br>**ಅಥವಾ**<br>ಕೊರಡ ಕೊನರಿಸಿ ....................................................<br>.............................................................................<br>.............................................................................<br>.............................................................. ಮತ್ತೇರಿದೆ.<br>*ಉತ್ತರ :*<br>ಯುಗದ ಹಿಂದಿನ ಕೊಳೆಯ ತಿಕ್ಕಿ ಮೈತೊಳೆದಂತೆ<br>ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ<br>ಬೆಲ್ಲಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ<br>ಎಲ್ಲರೆದೆಗಳ ತುಂಬ ಸವಿಚೈತ್ರವು.<br>**ಅಥವಾ**<br>ಕೊರಡ ಕೊನರಿಸಿ ತುದಿಗೆ ಮುಗುಳನಗೆ ಮುತ್ತಿಟ್ಟು<br>ಬರಡು ಜೀವಕೆ ಹೊಸತು ಚೈತನ್ಯವು<br>ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ<br>ಚಿಲಿಪಿಲಿಯ ಕಲರವಕೆ ಮತ್ತೇರಿದೆ. | $1 \times 3 = 3$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಕವಿಗಳ / ಸಾಹಿತಿಗಳ ಜನ್ಮಸಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | *ರಮೇಶಗೌಡ ಎಂ.ಕೆ. :*<br><br>***ಉತ್ತರ :***<br><br>ರಮೇಶಗೌಡ ಎಂ.ಕೆ. ಇವರ ಪೂರ್ಣಹೆಸರು ರಮೇಶಗೌಡ ಮಲ್ಲನಗೌಡ ಕಲ್ಲನಗೌಡ. ಇವರು ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಕಿತ್ತೂರು ಗ್ರಾಮದಲ್ಲಿ ಕ್ರಿ.ಶ. ೧೯೭೫ ರಲ್ಲಿ ಜನಿಸಿದರು. ಇವರು 'ಅಮೃತಕ್ಕೆ ಹಾರಿದ ಗರುಡ', 'ರೂಪಬಯಲು', 'ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ರತ್ನಾಕರವರ್ಣಿ ಮುದ್ದಣ್ಣ ದತ್ತಿ ಪ್ರಶಸ್ತಿ' ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 'ವರ್ಷದ ಉತ್ತಮ ಕೃತಿ' ಪ್ರಶಸ್ತಿಗಳು ಲಭಿಸಿವೆ. | |
| 32. | *ಬಸವರಾಜ ಸಬರದ :*<br><br>***ಉತ್ತರ :***<br><br>ಬಸವರಾಜ ಸಬರದ ಇವರು ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ಕ್ರಿ.ಶ. ೧೯೫೪ ರಲ್ಲಿ ಜನಿಸಿದರು. ಇವರು 'ನನ್ನವರ ಹಾಡು', 'ಹೋರಾಟ', 'ಮೂಡಲಕ ಕೆಂಪು ಮೂಡ್ಯಾವ', 'ನೂರು ಹನಿಗಳು', 'ದನಿಯೆತ್ತಿ ಹಾಡೇನ', 'ಬೆಳದಿಂಗಳು ಬಿಸಿಲಾತು', 'ಪ್ರತಿರೂಪ', 'ರೆಕ್ಕೆ ಮೂಡಿದಾಗ', 'ನರಬಲಿ', 'ಬೆಳ್ಳಕ್ಕಿ ಸಾಲು' ಇನ್ನು ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ, ಕುವೆಂಪು ಸಾಹಿತ್ಯ ಪುರಸ್ಕಾರ, ಪೆರ್ಲ ಕೃಷ್ಣಭಟ್ಟ ಪ್ರಶಸ್ತಿ, ಸಾಹಿತ್ಯಶ್ರೀ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯುವುದು :** | 4 × 3 = 12 |
| | ಕೃತಿ, ಕರ್ತೃ, ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಏನಾದರೂ ವರವನ್ನು ಕೇಳು ಕೊಡುತ್ತೇನೆ"<br>***ಉತ್ತರ :***<br>ಈ ಮೇಲಿನ ವಾಕ್ಯವನ್ನು ಅ.ರಾ. ಮಿತ್ರರವರು ಬರೆದ 'ಮಹಾಭಾರತ ಪಾತ್ರ–ಸಂಗತಿಗಳು' ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ಇಂದ್ರನು ಗಿಳಿಗೆ ಹೇಳುತ್ತಾನೆ. ಇಂದ್ರನು ಒಣಗಿ ಹೋದ ಮರದಲ್ಲಿ ವಾಸಿಸುತ್ತಿರುವ ಗಿಳಿಯ ತತ್ತ್ವನಿಷ್ಠೆಯನ್ನು ಮೆಚ್ಚಿಕೊಂಡು, ಗಿಳಿಯ ನಡತೆ ಲೋಕವರ್ತನೆಗೆ ವಿರುದ್ಧವಾಗಿದೆ ಎಂದುಕೊಂಡನು. ಮನುಷ್ಯನ ಬದುಕಿಗೆ ಈ ಸೂತ್ರ ಮಾದರಿಯಾಗಬಲ್ಲದು. ಎಂದುಕೊಂಡು ಪರಹಿತಾಕಾಂಕ್ಷಿಯಾಗಿರುವ ಗಿಳಿರಾಯನಿಗೆ ಏನಾದರೂ ವರವನ್ನು ಕೊಡಬೇಕು ಎಂದು ತೀರ್ಮಾನಿಸಿ, ಗಿಳಿಯ ಶ್ರದ್ಧೆಯನ್ನು ಮೆಚ್ಚಿ ಈ ಮೇಲಿನ ಮಾತನ್ನು ಇಂದ್ರನು ಹೇಳುತ್ತಾನೆ.<br>ಗಿಳಿಯ ತತ್ತ್ವನಿಷ್ಠೆ, ಶ್ರದ್ಧೆಯನ್ನು ಮೆಚ್ಚಿಕೊಂಡ ಇಂದ್ರನು ಗಿಳಿಯ ಮೇಲೆ ತೋರಿಸಿದ ಸಹಾನುಭೂತಿ ಮತ್ತು ಪ್ರೀತಿ ಈ ಮಾತಿನಲ್ಲಿ ಸುಂದರವಾಗಿ ಅಭಿವ್ಯಕ್ತಗೊಂಡಿದೆ. | |
| 34. | "ಅಮ್ಮನ ಮಾತು ಸುಳ್ಳಾಗಲಾರದು!"<br>***ಉತ್ತರ :***<br>ಈ ಮೇಲಿನ ವಾಕ್ಯವನ್ನು 'ಕುವೆಂಪು'ರವರು ಬರೆದ 'ನನ್ನ ಗೋಪಾಲ' ಕೃತಿಯಿಂದ ಆಯ್ದ 'ನನ್ನ ಗೋಪಾಲ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಗೋಪಾಲನು ಹೇಳುತ್ತಾನೆ. ಗೋಪಾಲನು ಶಾಲೆಯಿಂದ ಮನೆಗೆ ಬರುವಾಗ ಕಾಡಿನಲ್ಲಿಯ ಹೂವುಗಳನ್ನು ನೋಡಿ ಬೆರಗಾಗುತ್ತಾ, ಹಣ್ಣುಗಳನ್ನು ಆಯ್ದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ತಿನ್ನುತ್ತಾನೆ. ಆಗ ಕತ್ತಲಾಗುತ್ತದೆ. ಸೂರ್ಯನನ್ನು ಶಪಿಸಿ, ತಾಯಿಯ ಮಾತನ್ನು ನೆನಪಿಸಿಕೊಂಡು ತನ್ನ ಅಣ್ಣನನ್ನು ಕೂಗುತ್ತಾನೆ. ಈ ಸಂದರ್ಭದಲ್ಲಿ ಗೋಪಾಲ ಈ ಮೇಲಿನ ಮಾತನ್ನು ತನ್ನಲ್ಲಿಯೇ ಹೇಳಿಕೊಳ್ಳುತ್ತಾನೆ. | |
| | ಈ ಮಾತಿನಲ್ಲಿ ಗೋಪಾಲನಿಗೆ ತನ್ನ ತಾಯಿಯ ಹಾಗೂ ತಾಯಿಯ ಮಾತಿನ ಮೇಲಿರುವ ನಂಬಿಕೆ ಬಹಳ ಸುಂದರವಾಗಿ ಅಭಿವ್ಯಕ್ತಗೊಂಡಿದೆ. | |
| 35. | ''ಪರಹಿತಕೆ ಬಳಲುತಿರಲದುವೆ ಜೀವನವು'' | |
| | ***ಉತ್ತರ :*** | |
| | ಈ ಮೇಲಿನ ಸಾಲನ್ನು 'ಎಂ. ಗೋಪಾಲಕೃಷ್ಣ ಅಡಿಗ'ರು ಬರೆದ 'ಸಮಗ್ರ ಕಾವ್ಯ'ದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. | |
| | ಈ ಮಾತನ್ನು ಕವಿ ಓದುಗರಿಗೆ ಹೇಳುತ್ತಾರೆ. ಬದುಕು ಸಾರ್ಥಕವಾಗಬೇಕಾದರೆ ನರನೊಳಗೆ ನಾರಾಯಣನ ರೂಪವನ್ನು ಕಾಣಬೇಕು. ಭೂಮಿಯಲ್ಲಿಯೇ ದೇವಲೋಕದ ಸುಖವನ್ನು ಕಾಣಬೇಕು. ಪರರ ಒಳಿತಿಗಾಗಿ ದುಡಿಯುತ್ತಾ, ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದು ಹೇಳುವಾಗ ಈ ಮಾತನ್ನು ಕವಿ ಓದುಗರಿಗೆ ಹೇಳುತ್ತಾರೆ. | |
| | ಬದುಕನ್ನು ಸಾರ್ಥಕಪಡಿಸಿಕೊಳ್ಳುವ ರೀತಿ ಬಹಳ ಸುಂದರವಾಗಿ ಅಭಿವ್ಯಕ್ತಗೊಂಡಿದೆ. | |
| 36. | ''ಶಿವಶಿವ ಕಾದಿಗೆಲಿದೆವು'' | |
| | ***ಉತ್ತರ :*** | |
| | ಈ ಮೇಲಿನ ಸಾಲನ್ನು 'ಕುಮಾರವ್ಯಾಸ' ಬರೆದ 'ಕರ್ಣಾಟ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ' ಎಂಬ ಕೃತಿಯಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು' ಬಿಟ್ಟ ಮಂಡೆಯಲಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. | |
| | ಈ ಮಾತನ್ನು ಉತ್ತರಕುಮಾರನು ಹೇಳುತ್ತಾನೆ. ಅರ್ಜುನನು ರಣರಂಗದ ಕಡೆಗೆ ರಥವನ್ನು ಮುನ್ನಡೆಸುತ್ತಿರುತ್ತಾನೆ. ಆಗ ರಥದಲ್ಲಿರುವ ಉತ್ತರಕುಮಾರನು ಕೌರವರ ಸೇನಾಸಾಗರವನ್ನು ಕಂಡು ಭಯಗೊಂಡು ಈ ಮೇಲಿನ ಮಾತನ್ನು ಹೇಳುತ್ತಾನೆ. | |
| | ಈ ಸಾಲಿನಲ್ಲಿ ಉತ್ತರಕುಮಾರನಿಗಾದ ಭಯ ಮತ್ತು ದಿಗ್ಭ್ರಮೆ ಬಹಳ ಸುಂದರವಾಗಿ ಅಭಿವ್ಯಕ್ತಗೊಂಡಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂನ ವಿಶೇಷತೆಯನ್ನು ಬರೆಯಿರಿ.<br>***ಅಥವಾ***<br>ಥೇಮ್ಸ್ ನದಿಯ ಸುತ್ತಮುತ್ತ ಲೇಖಕರು ಕಂಡ ದೃಶ್ಯಗಳನ್ನು ವಿವರಿಸಿ.<br>***ಉತ್ತರ :***<br>ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ ಲಂಡನ್ನಿನಲ್ಲಿರುವ ಒಂದು ಜಗತ್ಪ್ರಸಿದ್ಧ ಮ್ಯೂಸಿಯಂ. ಈ ಮ್ಯೂಸಿಯಂನಲ್ಲಿ ವ್ಯಾಕ್ಸ್ ಗೊಂಬೆಗಳಿವೆ. ಮೇಡಂ ಟುಸ್ಸೋಡ್ ಈ ವ್ಯಾಕ್ಸ್ ಗೊಂಬೆಗಳನ್ನು ಮೊದಲು ಮಾಡಿದುದರಿಂದ ಈ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಬಂದಿತು. ಇಲ್ಲಿರುವ ಮೇಣದ ಗೊಂಬೆಗಳು ತದ್ರೂಪ ಒಬ್ಬ ವ್ಯಕ್ತಿಯನ್ನೇ ಹೋಲುತವೆ. ಈ ಮ್ಯೂಸಿಯಂನಲ್ಲಿ ಶಾರುಖ್ ಖಾನ್, ಅಮೀರ್ ಖಾನ್, ಅಮಿತಾಬ್ ಬಚ್ಚನ್. ಮರ್ಲಿನ್ ಮನ್ರೊ, ಬೆಕರ್, ಬೋರ್ಗ್ – ಹೀಗೆ ಪ್ರಸಿದ್ಧರ ವ್ಯಾಕ್ಸ್ ಗೊಂಬೆಗಳು ಇದೆ. ಈ ಮೂರ್ತಿಗಳ ಪಕ್ಕದಲ್ಲಿ ನಿಂತು ಫೋಟೋ ತೆಗೆಸಿಕೊಂಡರೆ ನಿಜವಾದ ವ್ಯಕ್ತಿಯೊಂದಿಗೆ ಇದ್ದೇವೇನೋ ಎಂದೆನಿಸುತ್ತದೆ. ಅಷ್ಟೊಂದು ಸಹಜತೆಯೇ ಆ ಮೇಣದ ಗೊಂಬೆಗಳ ವೈಶಿಷ್ಟ್ಯ. ಇದೇ ಮ್ಯೂಸಿಯಂನಲ್ಲಿ ಛೇಂಬರ್ ಆಫ್ ಹಾರರ್ಸ್ ಇದೆ. ಇಲ್ಲಿ ಚೀರುವ, ಭಯಾನಕವಾಗಿ ಕಿರುಚುವ ಶಬ್ದ ಕೇಳಿಬರುತ್ತದೆ. ಈ ಛೇಂಬರ್‌ನೊಳಗೆ ಹೋದರೆ ಅಲ್ಲಿ ನಮ್ಮ ಮೇಲೆ ಆಕ್ರಮಣ ಮಾಡಲು ಕತ್ತಿ ಹಿಡಿದು ಒಬ್ಬ ಬರುತ್ತಾನೆ. ವಿಕಾರವಾಗಿ ಕಿರುಚುತ್ತಾ ಹೊಟ್ಟೆಗೆ ಡ್ಯಾಗರ್‌ನಿಂದ ತಿವಿಯಲು ಬರುತ್ತಾನೆ. ಈ ಮ್ಯೂಸಿಯಂನೊಳಗೆ ಒಂದು ತಾರಾಲಯವಿದೆ. ಇದರಲ್ಲಿ ನಕ್ಷತ್ರಗಳನ್ನು ಇಡಿ ಕನ್ನಡಕದಿಂದ ನೋಡಬಹುದು. ಹೀಗೆ ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ ಅತ್ಯಂತ ವಿಶೇಷತೆಯಿಂದ ಕೂಡಿದೆ.<br>***ಅಥವಾ***<br>ಲಂಡನ್ನಿನಲ್ಲಿ ಹರಿಯುವ ಪ್ರಸಿದ್ಧವಾದ ನದಿ ಥೇಮ್ಸ್. ಥೇಮ್ಸ್ ನದಿಯ ಸುತ್ತಮುತ್ತ ಇರುವ ವಿಶ್ವ ಪ್ರಸಿದ್ಧ ದೃಶ್ಯಗಳನ್ನು ಲೇಖಕರು ನೋಡಿದರು. ಥೇಮ್ಸ್ ನದಿಯ ದಕ್ಷಿಣಕ್ಕೆ ಉದ್ಯಮಗಳು, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಫ್ಯಾಕ್ಟರಿಗಳು, ಹೆಚ್ಚಾಗಿ ರಾಜಕಾರಣಿಗಳು ಇರುತ್ತಾರೆ. ಉತ್ತರಕ್ಕೆ ವ್ಯಾಪಾರಿಗಳು, ಕಡಿಮೆ ಆದಾಯ ಹೊಂದಿರುವವರು ವಾಸಿಸುತ್ತಾರೆ. ಥೇಮ್ಸ್ ನದಿಯ ದಂಡೆಯ ಬದಿಯಲ್ಲಿ ವಾಸಿಸುವವರು ಶ್ರೀಮಂತರು. ಥೇಮ್ಸ್ ನದಿಯ ಮೇಲೆ ಇರುವ 'ಟವರ್ ಬ್ರಿಜ್'ನ್ನು ಲೇಖಕರು ನೋಡಿದರು. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದೂವರೆ–ಎರಡು ನಿಮಿಷದಲ್ಲಿ ಮೇಲಕ್ಕೆದ್ದು ಹಡಗುಗಳು ಹೋಗಲು ದಾರಿ ಮಾಡಿಕೊಡುತ್ತದೆ. ಲಂಡನ್ ಬ್ರಿಜ್‌ಗೆ ಹತ್ತಿರದಲ್ಲಿ 'ಟವರ್ ಆಫ್ ಲಂಡನ್'ನನ್ನು ಲೇಖಕರು ನೋಡಿದರು. ಇದು ೩–೪ ಅಂತಸ್ತಿನ ಚೌಕಾಕಾರದ ಬೃಹತ್ ಕಟ್ಟಡದ ಮೇಲೆ ಟವರ್‌ಗಳಿವೆ. ರಾಜರು ತಮಗಾಗದವರನ್ನು ಕೊಲ್ಲಿಸಿದ ಜಾಗವಿದು. ನಂತರ ಪಾರ್ಲಿಮೆಂಟ್ ಹಾಗೂ ಬಿಗ್‌ಬೆನ್ ಗಡಿಯಾರ ನೋಡಿದರು. ಪಾರ್ಲಿಮೆಂಟ್ ಹಳೇ ಯುರೋಪಿಯನ್ ಶೈಲಿಯ ಬೃಹತ್ ಕಟ್ಟಡ. ೩೨೦ ಅಡಿ ಗೋಪುರ ಹೊಂದಿದೆ. ನಂತರ 'ಲಂಡನ್ ಐ' ನೋಡಿದರು. ಇಲ್ಲಿ ಜಾತ್ರೆಗಳಲ್ಲಿರುವಂತೆ ದೊಡ್ಡ ಚಕ್ರ, ಅದರಲ್ಲಿ ೧೨ ಗಾಜಿನ ದುಂಡಗಿನ ಕೋಶಗಳು. ಇವು ನಿಧಾನವಾಗಿ ಮೇಲೇರಿ ನಿಧಾನವಾಗಿ ಕೆಳಗೆ ಇಳಿಯುತ್ತವೆ. ಇದರಲ್ಲಿ ಲಂಡನ್ ನಗರವನ್ನು ನಾಲ್ಕು ದಿಕ್ಕಿನಿಂದ ನೋಡಬಹುದು. ಈ ರೀತಿಯಾಗಿ ಥೇಮ್ಸ್ ನದಿಯ ಸುತ್ತಮುತ್ತ ಇರುವ ದೃಶ್ಯಗಳನ್ನು ವಿವರಿಸಬಹುದು. | |
| 38. | 'ಗುರಿ' ಪದ್ಯದ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>**ಅಥವಾ**<br>ನೀವು ಮೆಚ್ಚಿಕೊಂಡ 'ಗುರಿ' ಪದ್ಯದಲ್ಲಿನ ಮೌಲ್ಯಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.<br>***ಉತ್ತರ :***<br>ಎಂ. ಗೋಪಾಲಕೃಷ್ಣ ಅಡಿಗರು ರಚಿಸಿದ 'ಗುರಿ' ಪದ್ಯವು ಜೀವನ ಸಂದೇಶವನ್ನು ನೀಡುವಂತ ಪದ್ಯವಾಗಿದೆ. ಈ ಪದ್ಯವು ಬದುಕಿನ ಗುರಿ ಮತ್ತು ಬದುಕನ್ನು ಸಾರ್ಥಕಪಡಿಸಿಕೊಳ್ಳುವ ಬಗೆಯನ್ನು ಬಹಳ ಸುಂದರವಾಗಿ ಹೇಳುತ್ತದೆ. ಬದುಕಿಗೆ ಒಂದು ನಿಶ್ಚಿತ ಗುರಿ ಇರಬೇಕು. ಈ ಗುರಿಯನ್ನು ತಲುಪುವಾಗ ಮಾರ್ಗವೂ ಒಳ್ಳೆಯದಾಗಿರಬೇಕು. ನಮ್ಮ ಮನಸ್ಸು ಕೀಳಾಸೆಗಳ ಸುಳಿಗೆ ಸಿಲುಕದಂತೆ ನೋಡಿಕೊಳ್ಳಬೇಕು. ಜೀವನದ ಗುರಿಗಳನ್ನು ಹಂತ ಹಂತವಾಗಿ ಸಾಧಿಸಲು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪ್ರಯತ್ನಿಸಬೇಕು. ಗುರಿ ಸಾಧನೆಯ ಮಾರ್ಗದಲ್ಲಿ ಕಷ್ಟನಷ್ಟಗಳು ಎದುರಾಗಬಹುದು. ಅವುಗಳಿಗೆ ಧೃತಿಗೆಡದೆ ಆತ್ಮವಿಶ್ವಾಸದಿಂದ ನಿವಾರಿಸಿಕೊಂಡು ಮುಂದೆ ಸಾಗಬೇಕು. ಕಮಲವು ಕೆಸರೊಳಿದ್ದರೂ ಆಕಾಶವನ್ನು ನೋಡಿ, ಹೊಳೆಯುವ ರವಿಕಿರಣಗಳ ಸಿರಿಗೆ ಮೆರೆದಾಡಿ ವಿಜೃಂಭಿಸುವಂತೆ ಗುರಿಯ ಸಾಧನೆಗೆ ಹಗಲಿರುಳು ಪ್ರಯತ್ನಿಸಬೇಕು. ಕಷ್ಟನಷ್ಟಗಳಿಗೆ ಹೆದರದೆ, ಛಲದಿಂದ, ಧೈರ್ಯದಿಂದ, ದೃಢಸಂಕಲ್ಪದಿಂದ ಗುರಿ ಸಾಧನೆಗೆ ಪ್ರಯತ್ನಿಸಬೇಕು. ಜೀವನಕ್ಕೆ ಒಂದು ನಿಶ್ಚಿತ ಗುರಿ ಇರಬೇಕು. ಅದು ಹೆಗ್ಗುರಿಯಾಗಿರಬೇಕು. ಒಂದು ಬಾಣಕ್ಕೆ ಗುರಿ ಒಂದೇ, ದೇಹಕ್ಕೆ ಆತ್ಮ ಒಂದೇ. ಹಾಗೆಯೇ ಜೀವನಕ್ಕೆ ಒಂದೇ ಗುರಿ ಇರಬೇಕು. ಸ್ವಾರ್ಥವನ್ನು ತ್ಯಜಿಸಿ ಸರ್ವರನ್ನೂ ಗೌರವಿಸುತ್ತಾ, ಸಮಾಜದ ಏಳಿಗೆಗೆ, ಪರರ ಹಿತಕ್ಕೆ ಶ್ರಮಿಸುವ ಹಾಗೂ ನೊಂದವರ ಬದುಕಿಗೆ ಸಹಾಯ ಮಾಡುವ ದಿಸೆಯಲ್ಲಿ ನಮ್ಮ ಬದುಕು ರೂಪಿತಗೊಳ್ಳಬೇಕು. ಸಮಾಜದಿಂದ ಅನುಕೂಲಗಳನ್ನು ಪಡೆದು ಬೆಳೆದ ನಾವು ಅದೇ ಸಮಾಜದ ಹಿತಕ್ಕೆ ದುಡಿಯುವಂತಾಗಬೇಕು. ಆಗ ಬದುಕು ಸಾರ್ಥಕವಾಗಲು ಸಾಧ್ಯ.<br><br>***ಅಥವಾ***<br><br>ಎಂ. ಗೋಪಾಲಕೃಷ್ಣ ಅಡಿಗರು ರಚಿಸಿದ 'ಗುರಿ' ಪದ್ಯವು ಅನೇಕ ಜೀವನ ಮೌಲ್ಯಗಳನ್ನು ನೀಡುವ ಪದ್ಯವಾಗಿದೆ. ಈ ಪದ್ಯವು ಬದುಕಿಗೆ ಇರಬೇಕಾದ ನಿಶ್ಚಿತ ಗುರಿ ಮತ್ತು ಬದುಕಿನ ಸಾರ್ಥಕತೆಯನ್ನು ಬಹಳ ಅರ್ಥಪೂರ್ಣವಾಗಿ ಹೇಳುತ್ತದೆ. ಬದುಕಿಗೆ ಒಂದು ನಿಶ್ಚಿತವಾದ ಗುರಿ ಇರಬೇಕು. ಹಲವು ಗುರಿಗಳನ್ನು ಇಟ್ಟುಕೊಂಡರೆ ಯಶಸ್ಸು ಕಾಣಲು ಸಾಧ್ಯವಿಲ್ಲ. ಒಂದು ಬಾಣಕ್ಕೆ ಒಂದೇ ಗುರಿ ಇರುವಂತೆ, ಒಂದು ದೇಹದೊಳಗೆ ಒಂದೇ ಆತ್ಮ ಇರುವಂತೆ, ಜೀವನಕ್ಕೆ ಒಂದೇ ಗುರಿ ಇರಬೇಕು. ಅದು ಹೆಗ್ಗುರಿಯಾಗಿರಬೇಕು. ಈ ಗುರಿ ಸಾಧಿಸಲು ಹಗಲಿರುಳು ಹೋರಾಡಬೇಕು. ಗುರಿ ಸಾಧನೆಯ ಮಾರ್ಗದಲ್ಲಿ ಏನೇ ಕಷ್ಟಗಳು ಬಂದರೂ ಅವುಗಳನ್ನು ನಿವಾರಿಸಿಕೊಂಡು ಆತ್ಮವಿಶ್ವಾಸದಿಂದ, ದೃಢಸಂಕಲ್ಪದಿಂದ ಮತ್ತು ಛಲದಿಂದ ಮುಂದೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸಾಗಬೇಕು. ಅದೇ ರೀತಿಯಾಗಿ ಬದುಕು ಸಾರ್ಥಕವಾಗಬೇಕಾದರೆ, ಸ್ವಾರ್ಥವನ್ನು ತ್ಯಜಿಸಿ, ಸರ್ವರನ್ನೂ ಗೌರವಿಸುತ್ತಾ, ನರನಲ್ಲಿ ನಾರಾಯಣನನ್ನು ಕಾಣುತ್ತಾ, ಸಮಾಜದ ಏಳಿಗೆಗಾಗಿ, ಪರರ ಹಿತಕ್ಕಾಗಿ ಶ್ರಮಿಸಬೇಕು. ನೊಂದವರ ಬದುಕಿಗೆ ಸಹಾಯ ಮಾಡುವ ದಿಶೆಯಲ್ಲಿ ನಮ್ಮ ಬದುಕು ರೂಪಿತಗೊಳ್ಳಬೇಕು. ಸಮಾಜದಿಂದ ಅನುಕೂಲಗಳನ್ನು ಪಡೆದು ಬೆಳೆದ ನಾವು ಅದೇ ಸಮಾಜದ ಹಿತಕ್ಕೆ ದುಡಿಯುವಂತಾಗಬೇಕು. ಆಗ ಬದುಕು ಸಾರ್ಥಕವಾಗಲು ಸಾಧ್ಯ. | |
| | **ಅಪಠಿತ ಗದ್ಯ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 4 × 1 = 4 |
| | ಮನಸ್ಸು ರೋಗವನ್ನು ಸೃಷ್ಟಿಸಬಲ್ಲದು, ಗುಣಪಡಿಸಲೂ ಬಲ್ಲದು! ತಾಳ್ಮೆ, ಪ್ರೀತಿ, ಕರುಣೆ, ದಾನಬುದ್ಧಿ, ನಿಸ್ವಾರ್ಥ ಸೇವಾ ಮನೋಭಾವ – ಇವೇ ಮೊದಲಾದ ರಚನಾತ್ಮಕ ಭಾವನೆಗಳು ದೇಹ–ಯಂತ್ರದ ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುತ್ತವೆ. ನಮ್ಮಲಿ ಸಂತೋಷ, ತೃಪ್ತಿ ಹಾಗೂ ಸೃಜನಶೀಲ ಪ್ರವೃತ್ತಿಗಳನ್ನು ಎಚ್ಚರಗೊಳಿಸುತ್ತವೆ. ಹಾಗೆಯೇ ನಿಷೇಧಮಯ ಭಾವನೆಗಳಿಂದ ಭಯ, ಚಿಂತೆ, ದ್ವೇಷ, ಅಸೂಯೆ, ಸೋಲಿನ ಮನೋಭಾವ ಹಾಗೂ ಸಂಕುಚಿತ ಸ್ವಾರ್ಥದ ನಾನಾ ಅವತಾರಗಳು ಸಮಸ್ತ ದೇಹ ಮತ್ತು ಅಂಗಾಂಗಗಳಿಗೆ ಕೆಡಕನ್ನುಂಟು ಮಾಡಿ ರೋಗಕ್ಕೆ ಕಾರಣವಾಗುತ್ತವೆ. ಪ್ರಸನ್ನತೆ, ಶಾಂತತೆ, ಧೈರ್ಯ, ಆತ್ಮವಿಶ್ವಾಸ, ದೃಢ ನಿಶ್ಚಯ ಇವೇ ಮೊದಲಾದ ಭಾವನೆಗಳು ಶರೀರದ ಸುಸ್ಥಿತಿಗೆ ಆರೋಗ್ಯವರ್ಧಕ ಟಾನಿಕ್ಕಿಗಿಂತಲೂ ಹೆಚ್ಚಿನ ಸಹಾಯ ಮಾಡುತ್ತವೆ! ಮನಸ್ಸಿನಲ್ಲಿ ಉದಿಸುವ ಯೋಚನೆ ಎಂಬ ದ್ರವ್ಯದಿಂದ ವಿಷವನ್ನು ತಯಾರಿಸಬಹುದು, ಅಮೃತವನ್ನೂ ತಯಾರಿಸಬಹುದು. ಮನಸ್ಸು ಕೆಲಸ ಮಾಡುವ ಸೂಕ್ಷ್ಮ ನಿಯಮವನ್ನು ತಿಳಿದುಕೊಂಡರೆ, ಶ್ರದ್ಧೆಯಿಂದ ಶ್ರಮಿಸಿದರೆ ವಿಷವನ್ನೂ ಅಮೃತವನ್ನಾಗಿಸಬಹುದು. ಜಾಡ್ಯಮನೋಭಾವ, ಅನೈಕಾಗ್ರತೆ, ಅವ್ಯವಸ್ಥೆ, ಸಿಡುಕು, ಬಲವಾದ ಪೂರ್ವಾಗ್ರಹಗಳು ಮನಸ್ಸೆಂಬ ಯಂತ್ರವನ್ನು ಹಾಳು ಮಾಡಿ ಬಿಡುತ್ತವೆ. ಕ್ರಮನಿಯಮ, ವ್ಯವಸ್ಥೆ, ತಾಳ್ಮೆ, ಸಮತೋಲ, ಸದುದ್ದೇಶ, ವ್ಯಾವಹಾರಿಕತೆ – ಇವುಗಳ ಸಹಕಾರದಿಂದ ಯೋಜನೆಗಳನ್ನು ರೂಪಿಸಿಕೊಂಡರೆ ನಮ್ಮನ್ನು ದುರ್ಬಲಗೊಳಿಸುವ, ದುರಂತಕ್ಕೆಳೆಸುವ ನಿಷೇಧಾತ್ಮಕ ಭಾವನೆಗಳು ಸಮೀಪ ಸುಳಿಯಲಾರವು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 39. | ಮನಸ್ಸು ವಿಷವನ್ನು ಹೇಗೆ ಅಮೃತವನ್ನಾಗಿಸುತ್ತದೆ ?<br>***ಉತ್ತರ :***<br>ಮನಸ್ಸು ಕೆಲಸ ಮಾಡುವ ಸೂಕ್ಷ್ಮ ನಿಯಮವನ್ನು ತಿಳಿದುಕೊಂಡರೆ, ಶ್ರದ್ಧೆಯಿಂದ ಶ್ರಮಿಸಿದರೆ ವಿಷವನ್ನೂ ಅಮೃತವನ್ನಾಗಿಸಬಹುದು. | |
| 40. | ವ್ಯಕ್ತಿಯಲ್ಲಿ ನಿಷೇಧಾತ್ಮಕ ಭಾವನೆಗಳು ಯಾವಾಗ ಸಮೀಪ ಸುಳಿಯುವುದಿಲ್ಲ ?<br>***ಉತ್ತರ :***<br>ಕ್ರಮನಿಯಮ, ವ್ಯವಸ್ಥೆ, ತಾಳ್ಮೆ, ಸಮತೋಲ, ಸದುದ್ದೇಶ, ವ್ಯಾವಹಾರಿಕತೆ – ಇವುಗಳ ಸಹಕಾರದಿಂದ ಯೋಜನೆಗಳನ್ನು ರೂಪಿಸಿಕೊಂಡರೆ ವ್ಯಕ್ತಿಯಲ್ಲಿ ನಿಷೇಧಾತ್ಮಕ ಭಾವನೆಗಳು ಸಮೀಪ ಸುಳಿಯುವುದಿಲ್ಲ. | |
| 41. | ರಚನಾತ್ಮಕ ಭಾವನೆಗಳು ನಮ್ಮಲ್ಲಿ ಯಾವ ಪ್ರವೃತ್ತಿಗಳನ್ನು ಎಚ್ಚರಗೊಳಿಸುತ್ತವೆ ?<br>***ಉತ್ತರ :***<br>ರಚನಾತ್ಮಕ ಭಾವನೆಗಳು ನಮ್ಮಲ್ಲಿ ಸಂತೋಷ, ತೃಪ್ತಿ ಹಾಗೂ ಸೃಜನಶೀಲ ಪ್ರವೃತ್ತಿಗಳನ್ನು ಎಚ್ಚರಗೊಳಿಸುತ್ತವೆ. | |
| 42. | ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುವ ರಚನಾತ್ಮಕ ಭಾವನೆಗಳು ಯಾವುವು ?<br>***ಉತ್ತರ :***<br>ತಾಳ್ಮೆ, ಪ್ರೀತಿ, ಕರುಣೆ, ದಾನಬುದ್ಧಿ, ನಿಸ್ವಾರ್ಥ ಸೇವಾ ಮನೋಭಾವ – ಇವೇ ಮೊದಲಾದ ರಚನಾತ್ಮಕ ಭಾವನೆಗಳು ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುತ್ತವೆ. | |
| | **ವಿಭಾಗ – 'ಬಿ'**<br>**ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 43. | 'ಬೇರೊಬ್ಬ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಆಗಮ ಸಂಧಿ (ಬಿ) ಲೋಪ ಸಂಧಿ<br>(ಸಿ) ಆದೇಶ ಸಂಧಿ (ಡಿ) ಗುಣ ಸಂಧಿ<br>***ಉತ್ತರ :*** (ಬಿ) ಲೋಪ ಸಂಧಿ | |
| 44. | 'ಒಗ್ಗಟ್ಟು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ಕರ್ಮಧಾರಯ ಸಮಾಸ (ಬಿ) ತತ್ಪುರುಷ ಸಮಾಸ<br>(ಸಿ) ಬಹುವ್ರೀಹಿ ಸಮಾಸ (ಡಿ) ದ್ವಿಗು ಸಮಾಸ<br>***ಉತ್ತರ :*** (ಡಿ) ದ್ವಿಗು ಸಮಾಸ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | "ಸೀತೆಯ ಮುಖಕಮಲ ಅರಳಿತು" – ಈ ವಾಕ್ಯದಲ್ಲಿರುವ ಅಲಂಕಾರ<br>(ಎ) ರೂಪಕಾಲಂಕಾರ (ಬಿ) ಉಪಮಾಲಂಕಾರ<br>(ಸಿ) ಉತ್ಪ್ರೇಕ್ಷಾಲಂಕಾರ (ಡಿ) ದೃಷ್ಟಾಂತಾಲಂಕಾರ<br>***ಉತ್ತರ :*** (ಎ) ರೂಪಕಾಲಂಕಾರ | |
| 46. | 'ನೂಕಲು' ಪದಕ್ಕೆ ಪ್ರಸ್ತಾರ ಹಾಕಿದಾಗ ಮಾತ್ರೆಗಳ ಸಂಖ್ಯೆ<br>(ಎ) ಆರು ಮಾತ್ರೆ (ಬಿ) ಐದು ಮಾತ್ರೆ<br>(ಸಿ) ನಾಲ್ಕು ಮಾತ್ರೆ (ಡಿ) ಮೂರು ಮಾತ್ರೆ<br>***ಉತ್ತರ :*** (ಸಿ) ನಾಲ್ಕು ಮಾತ್ರೆ | |
| 47. | 'ಕಾರ್ಯ' ಪದದ ತದ್ಭವರೂಪ<br>(ಎ) ಕಜ್ಜ (ಬಿ) ಕರ್ಜ<br>(ಸಿ) ಕಾರಯ (ಡಿ) ಕಾಯ<br>***ಉತ್ತರ :*** (ಎ) ಕಜ್ಜ | |
| 48. | 'ವೈಪರಿತ್ಯ' ಪದದ ಅರ್ಥ<br>(ಎ) ಅಪಘಾತ (ಬಿ) ಹೊಂದಾಣಿಕೆ<br>(ಸಿ) ಒಗ್ಗಟ್ಟು (ಡಿ) ವಿರೋಧ<br>***ಉತ್ತರ :*** (ಡಿ) ವಿರೋಧ | |
| 49. | 'ಜೀವನದಲ್ಲಿ' ಪದದಲ್ಲಿರುವ ವಿಭಕ್ತಿ<br>(ಎ) ದ್ವಿತೀಯಾ (ಬಿ) ಸಪ್ತಮಿ<br>(ಸಿ) ಪ್ರಥಮಾ (ಡಿ) ತೃತೀಯಾ<br>***ಉತ್ತರ :*** (ಬಿ) ಸಪ್ತಮಿ | |
| 50. | 'ಹೋಗುವನು' ಕ್ರಿಯಾಪದ ಈ ಕಾಲದಲ್ಲಿದೆ<br>(ಎ) ಭೂತಕಾಲ (ಬಿ) ವರ್ತಮಾನಕಾಲ<br>(ಸಿ) ಭವಿಷ್ಯತ್‌ಕಾಲ (ಡಿ) ಗತಕಾಲ<br>***ಉತ್ತರ :*** (ಸಿ) ಭವಿಷ್ಯತ್‌ಕಾಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 51. | ‘ವಿಜ್ಞಾನಿ’ ಪದವು ಈ ಗುಂಪಿಗೆ ಸೇರುತ್ತದೆ<br>(ಎ) ರೂಢನಾಮ (ಬಿ) ಅನ್ವರ್ಥನಾಮ<br>(ಸಿ) ಅಂಕಿತನಾಮ (ಡಿ) ಸರ್ವನಾಮ<br>***ಉತ್ತರ :*** (ಬಿ) ಅನ್ವರ್ಥನಾಮ | |
| 52. | ಅನುಕರಣಾವ್ಯಯಕ್ಕೆ ಉದಾಹರಣೆಯಾದ ಪದ<br>(ಎ) ಗಿಡಗಂಟೆ (ಬಿ) ಬೇಗಬೇಗ<br>(ಸಿ) ಕಟ್ಟಕಡೆ (ಡಿ) ಜುಳುಜುಳು<br>***ಉತ್ತರ :*** (ಡಿ) ಜುಳುಜುಳು | |
| 53. | ಗ್ರಾಂಥಿಕ ರೂಪದಲ್ಲಿರುವ ಪದ<br>(ಎ) ಕೂಡ್ರಿಸಿ (ಬಿ) ಬರ್ತಾನೆ<br>(ಸಿ) ನೋಡುವವರಿಗೆ (ಡಿ) ಬಿಡುತಾವೆ<br>***ಉತ್ತರ :*** (ಸಿ) ನೋಡುವವರಿಗೆ | |
| 54. | ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ<br>(ಎ) ಹತ್ತು (ಬಿ) ಏಳು<br>(ಸಿ) ಐದು (ಡಿ) ಒಂಬತ್ತು<br>***ಉತ್ತರ :*** (ಎ) ಹತ್ತು | |
| | **ವಿಭಾಗ – ‘ಸಿ’** | |
| 55. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>* ಹಕ್ಕಿಗಳಿಗೆ ಗೂಡು; ಮಕ್ಕಳಿಗೆ ತಾಯಿ<br>* ಕಾಯಕವೇ ಕೈಲಾಸ<br>* ಬೆಳೆಯುವ ಸಿರಿ ಮೊಳಕೆಯಲ್ಲಿ<br>***ಉತ್ತರ :*** | 1 × 3 = 3 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 56. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ನಿಮ್ಮನ್ನು ಚಿಕ್ಕೋಡಿಯ ಸರ್ಕಾರಿ ಪ್ರೌಢಶಾಲೆಯ 'ಅರುಣ' ಎಂದು ಭಾವಿಸಿಕೊಂಡು, ವಾರ್ಷಿಕ ಪರೀಕ್ಷೆಯ ಸಿದ್ಧತೆಯನ್ನು ಕುರಿತು ಕೂಡಲಸಂಗಮದ ಶರಣ ಬಸವೇಶ್ವರ ಪ್ರೌಢಶಾಲೆಯ 'ಗಿರೀಶ' ಎಂಬ ಗೆಳೆಯನಿಗೆ ಪತ್ರವೊಂದನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ರಾಯಚೂರಿನ ಸರ್ಕಾರಿ ಪ್ರೌಢಶಾಲೆಯ 'ರಮ್ಯಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಕುಡಿಯುವ ಶುದ್ಧನೀರಿನ ಸೌಲಭ್ಯವನ್ನು ಮಾಡಿಕೊಡುವಂತೆ ಕೋರಿ ಶಾಲೆಯ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರ ಬರೆಯಿರಿ. | |
| | ***ಉತ್ತರ :*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |
| | **ಅಥವಾ** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |
| 57. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | * ಕೆರೆಗಳ ಮಹತ್ವ | |
| | * ಬಾಲ್ಯವಿವಾಹ ಒಂದು ಸಾಮಾಜಿಕ ಪಿಡುಗು | |
| | * ದೂರದರ್ಶನದಿಂದಾಗುವ ಪ್ರಯೋಜನಗಳು | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |